## ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಮಡಿಕೇರಿ, ಕೊಡಗು.

**ಒ.ಎಸ್.ನಂಃ 83/2019**

ಪಿಡಬ್ಲ್ಯುಃ - 1

ದಿನಾಂಕಃ20.08.2024 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಜಿ. ಆರ್. ಆರ್. ವಕೀಲರಿಂದಃ-

1 ನೇ ವಾದಿ ನನ್ನ ತಂದೆ. 2 ನೇ ವಾದಿ ನನ್ನ ಚಿಕ್ಕಪ್ಪ. ವಾದಿಗಳಿಬ್ಬರೂ ಆರೋಗ್ಯವಾಗಿದ್ದಾರೆ ಎಂದರೆ ನನ್ನ ತಂದೆಗೆ ಕಾಲು ಮುರಿದು ಹೋಗಿದೆ, ನನ್ನ ಚಿಕ್ಕಪ್ಪನಿಗೆ ಹುಷಾರಿರುವುದಿಲ್ಲ. 1 ಮತ್ತು 2 ನೇ ವಾದಿಗಳಿಗೆ ಆರೋಗ್ಯ ಸರಿ ಇಲ್ಲ ಎಂದು ತೋರಿಸಲು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಹೇಳುತ್ತಾರೆ 1 ಮತ್ತು 2 ನೇ ವಾದಿಗಳಿಬ್ಬರೂ ಆರೋಗ್ಯವಾಗಿದ್ದಾರೆ ಹಾಗೂ ನ್ಯಾಯಾಲಯದ ಮುಂದೆ ಬಂದು ಸಾಕ್ಷಿ ನುಡಿಯಲು ಸಕ್ಷಮರಾಗಿದ್ದಾರೆ ಎಂದರೆ ಸರಿಯಲ್ಲ.

2. ನಿಪಿ-2 ದಾಖಲೆಯನ್ನು ತಯಾರಿಸಲು ಯಾರು ಮಾಹಿತಿ ಕೊಟ್ಟಿದ್ದಾರೆ ಎಂದರೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನಿಪಿ-2 ದಾಖಲೆಯನ್ನು ಮಡಿಕೇರಿಯಲ್ಲಿರುವ ನನ್ನ ವಕೀಲರ ಕಚೇರಿಯಲ್ಲಿ ತಯಾರಿಸಿದ್ದಾರೆ. ನನ್ನ ವಕೀಲರಾದ ವಿದ್ಯಾಧರ ಅವರಿಗೆ ಮಾಹಿತಿಯನ್ನು ನಾನೇ ನೀಡಿದ್ದೇನೆ. ನಿಪಿ-2 ದಾಖಲೆಯನ್ನು ನೋಟರಿ ಮಾಡಿದಾಗ ನಾನು ನೋಟರಿಯವರ ಮುಂದೆ

ಹೋಗಿದ್ದೇನೆ, ಯಾವ ನೋಟರಿಯವರು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ನಿಪಿ-2 ರಲ್ಲಿ ನನ್ನ ಸಹಿ ಇರುವುದಿಲ್ಲ. ನಿಪಿ-2 ರಲ್ಲಿ ವಾದಿಗಳ ಭಾವಚಿತ್ರಗಳು ಇಲ್ಲ ಎಂದರೆ ಅವಶ್ಯಕತೆ ಇರುವುದಿಲ್ಲ. ನಿಪಿ-2 ಕ್ಕೆ ವಾದಿಗಳು ಮಡಿಕೇರಿಯಲ್ಲಿ ಸಹಿ ಮಾಡಿದ್ದಾರೆ, ನಾನೇ ಅವರನ್ನು ಮಡಿಕೇರಿಗೆ ಕರೆದುಕೊಂಡು ಬಂದಿರುತ್ತೇನೆ. ನಿಪಿ-2 ಕ್ಕೆ ಇಬ್ಬರು ಸಾಕ್ಷಿದಾರರನ್ನು ಸಹಿ ಮಾಡಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ನಾನು ವಾದಿಗಳನ್ನು ಮಾತ್ರ ಕರೆದುಕೊಂಡು ಬಂದು ನಿಪಿ-2 ಕ್ಕೆ ಸಹಿ ಮಾಡಿಸಿದ್ದೇನೆ.

3. 1 ನೇ ಪ್ರತಿವಾದಿಯು ಕಾಫಿ ಗಿಡಗಳಲ್ಲಿ ಕಪಾತಿ ಮಾಡುವುದರಿಂದ ನಿಪುಣರಾದ ಕಾರಣ ಅವರನ್ನು ಕಪಾತ್ ಆಲಿ ಎಂದು ಕರೆಯುತ್ತಾರೆ ಎಂದರೆ ಸರಿ. ಆಲಿಯವರ ಪೂರ್ತಿ ಹೆಸರು ಸಿ. ಎಂ. ಆಲಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಂಡತಿ ನಮ್ಮ ಊರಿನವರೇ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಂಡತಿಯು ಬಲ್ಯತ್ ಕಾರಂಡ ಕುಟುಂಬದವರು ಎಂದರೆ ಸರಿ.

4. ನಾನು ಹಾಜರು ಪಡಿಸಿದ ನಿಪಿ-1 ಪಹಣಿ ಪತ್ರಿಕೆಯಲ್ಲಿ ನನ್ನ ತಂದಯ ಹೆಸರಾಗಲಿ, ನನ್ನ ಚಿಕ್ಕಪ್ಪನ ಹೆಸರಾಗಲಿ ಇಲ್ಲ ಎಂದರೆ ಪ್ರತಿವಾದಿಗಳು ಅವರ ಹೆಸರಿಗೆ ಪಹಣಿ ಮಾಡಲು ಬಿಟ್ಟಿರುವುದಿಲ್ಲ. ನಾನು ಈ ನ್ಯಾಯಾಲಯದಲ್ಲಿ ಕೇಳಿದ ಪರಿಹಾರಕ್ಕೆ ಅವಶ್ಯಕತೆ ಇರುವ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ತಂದೆ ಮತ್ತು ಚಿಕ್ಕಪ್ಪನ ಹೆಸರಿನಲ್ಲಿ ಇತ್ತು ಎಂದು ತೋರಿಸುವ 1957 ನೇ ಇಸವಿಯಿಂದ 2000 ಇಸವಿಯವರೆಗೆ ಇರುವ ಜಮಾಬಂಧಿಯನ್ನು ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿದ್ದೇನೆ.

5. ನಾನು ನನ್ನ ವಾದ ಪತ್ರದ ಕಂಡಿಕೆ 2 ರಲ್ಲಿ ಮಂಜೇರಿ ಅಹಮ್ಮದ್ ರವರಿಗೆ ದಾವಾ ಆಸ್ತಿಯು ಪಾಲಿಗೆ ಬಂದಿದೆ ಎಂದು ಹೇಳಿದ್ದೀರಿ, ಆ ಬಗ್ಗೆ ಪಾಲುಪಟ್ಟಿಯನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ತುಂಬಾ ವರ್ಷಗಳಿಂದ ಪಾರಂಪರ್ಯವಾಗಿ ಇರುವ ಜಾಗ ಎಂದು ನುಡಿಯುತ್ತಾರೆ. ಮಂಜೇರಿ ಅಹಮ್ಮದ್ ರವರಿಗೆ ಇಬ್ಬರು ಗಂಡು ಮಕ್ಕಳು. ಅವರಿಗೆ ಹೆಣ್ಣು ಮಕ್ಕಳು ಇರುವುದಿಲ್ಲ.

6. ದಾವಾ ಆಸ್ತಿಯು ಮನೆ ದಳ ಎಂದು ಹೇಳಿದ್ದೀರಿ, ಸದರಿ ಆಸ್ತಿಗೆ ಸಂಬಂಧಿಸಿದಂತೆ ನಮೂನೆ-9 ಮತ್ತು 12 ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿದ್ದೇನೆ. 1 ನೇ ಪ್ರತಿವಾದಿ ಕೇರಳದಿಂದ ಕೆಲಸ ಹುಡುಕಿಕೊಂಡು ಕೊಡಗಿಗೆ ಬಂದು ಎಮ್ಮೆಮಾಡು ಗ್ರಾಮದ ಎಂ. ಕೆ. ಚಂಗಪ್ಪ ಅವರ ತೋಟದಲ್ಲಿ ಆಶ್ರಯ ಪಡೆದಿದ್ದರು ಎಂದರೆ ಸರಿ. ಆದರೆ ಆ ಸಮಯದಲ್ಲಿ ಚಂಗಪ್ಪ ರವರು ಅವರ ಮನೆಯ ಕೆಲಸದವರು ಉಳಿದುಕೊಳ್ಳಲು ನನ್ನ ಮನೆಯ ಸ್ವಲ್ಪ ಜಾಗ ಬೇಕು ಎಂದು ಕೇಳಿದ್ದರು. ಆಗ ನಾನು ನನಗೆ ಸೇರಿ ಕೊಟ್ಟಿಗೆ ಮನೆಯನ್ನು ಚಂಗಪ್ಪ ಅವರಿಗೆ ಅವರ ಆಳುಗಳು ಉಳಿದುಕೊಳ್ಳಲು ಕೊಟ್ಟಿರುತ್ತೇನೆ.

7. ನಿಪಿ-1 ಪಹಣಿ ಪತ್ರಿಕೆಯಲ್ಲಿ ಕಾಣುವ ಯೂಸುಫ್ ಬಿನ್ ಮಂಜೇರಿ ಪೌತಿ ಐಮದೆ ಎಂದರೆ ಈ ದಾವೆಯ 2 ನೇ ವಾದಿ ಎಂದರೆ ಸರಿ. ಯೂಸುಫ್ ರವರು ನಿಪಿ-1 ದಾಖಲೆಯಲ್ಲಿ ಕಾಣುವ ಆಸ್ತಿಗ ಮಾಲೀಕರಾಗಿದ್ದರಿಂದ ಸದರಿ ಜಾಗದಲ್ಲಿ ಉಳಿದುಕೊಳ್ಳಲು 1 ನೇ ಪ್ರತಿವಾದಿಗೆ ಅವಕಾಶ ಕೊಟ್ಟಿದ್ದರು ಎಂದರೆ ಸರಿಯಲ್ಲ. 1970 ನೇ ಇಸವಿಯಿಂದಲೇ 1 ನೇ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ವಾಸವಿದ್ದಾರೆ ಹಾಗೂ 2 ನೇ ಪ್ರತಿವಾದಿ

1 ನೇ ಪ್ರತಿವಾದಿ ಉಳಿದುಕೊಳ್ಳಲು ಅವಕಾಶ ಕೊಟ್ಟಿದ್ದರು ಎಂದರೆ 2 ನೇ ಪ್ರತಿವಾದಿ ಪಟ್ಟೇದಾರರಾಗಿದ್ದಾರೆ ಹಾಗೂ ಅವರೇ ಅಕ್ರಮವಾಗಿ ದಾವಾ ಸ್ವತ್ತಿನಲ್ಲಿ ಇದ್ದರು ಮತ್ತು 1 ನೇ ಪ್ರತಿವಾದಿಗೆ ಉಳಿದುಕೊಳ್ಳಲು ನಾವೇ ಬಿಟ್ಟಿದ್ದೆವು ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರೆ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.)

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

**ಸಹಿ/-**

**ಪ್ರಧಾನ ಜೆಎಂಎಫ್‌ಸಿ, ಮಡಿಕೇರಿ.**